ಪ್ರಜಾವಾಣಿ

**Sunday, October 16th , 2011**

ದಕ್ಷಿಣ ವಲಯ ಅಂತರ ವಿವಿ ಮಹಿಳಾ ಟೆನಿಸ್ ಟೂರ್ನಿ

# ಜೈನ್ ವಿವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಂಗಳೂರಿನ ಜೈನ್ ವಿವಿ ತಂಡ, ನಿರೀಕ್ಷೆಯಂತೆ ದಕ್ಷಿಣ ವಲಯ ಅಂತರ ವಿವಿ ಮಹಿಳಾ ಟೆನಿಸ್ ಟೂರ್ನಿಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಶನಿವಾರ ಮುಕ್ತಾಯಗೊಂಡ ಟೂರ್ನಿಯ ಏಕಪಕ್ಷೀಯವಾದ ಫೈನಲ್ ಪಂದ್ಯಗಳಲ್ಲಿ ಜೈನ್ ವಿವಿ ತಂಡ ಚೆನ್ನೈನ ಮದ್ರಾಸ್ ವಿವಿ ತಂಡವನ್ನು 2–0 ಅಂತರದಿಂದ ಮಣಿಸಿತು.

ಮಳೆಯ ಕಾರಣ ಫೈನಲ್ ಪಂದ್ಯವನ್ನು ಸರಳೀಕರಿಸಲಾಯಿತು. ಆರ್. ಭವಾನಿ ವಿರುದ್ಧ ಶಲಾಕಾ ಯು 8–3 ಪಾಯಿಂಟ್‌ಗಳಿಂದ ಜಯ ಸಾಧಿಸಿ ತಂಡಕ್ಕೆ ಭರವಸೆ ನೀಡಿದರು.

ಡಬಲ್ಸ್ ವಿಭಾಗದಲ್ಲಿ ಪ್ರಾರ್ಥನಾ ಹಾಗೂ ಪ್ರೇರಣಾ ಜೋಡಿ 8–3ರ ಅಂತರದಿಂದ ಪ್ರೀತಿ ಹಾಗೂ ಭವಾನಿ ಜೋಡಿ ವಿರುದ್ಧ ಗೆಲುವು ಸಾಧಿಸಿ ಪ್ರಶಸ್ತಿಗೆ ಮುತ್ತಿಟ್ಟರು. ಆತಿಥೇಯ ವಿಟಿಯು ತಂಡ, ತಮಿಳುನಾಡಿನ ಕಟ್ಟಂಕುಲತ್ತೂರಿನ ಎಸ್‌ಆರ್‌ಎಂ ವಿವಿ ತಂಡವನ್ನು (2–0) ಸೋಲಿಸುವ ಮೂಲಕ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಇದಕ್ಕೂ ಮೊದಲು ನಡೆದ ಸೆಮಿಫೈನಲ್‌ನಲ್ಲಿ ಜೈನ್ ವಿವಿ, ವಿಟಿಯು ತಂಡವನ್ನು (2–0) ಸೋಲಿಸಿತು. ಸಿಂಗಲ್ಸ್‌ನಲ್ಲಿ ಶಲಾಕಾ 7–5, 6–3ರಿಂದ ಅಕ್ಷತಾ ಬಿ. ರಾಜ್ ವಿರುದ್ಧ, ಡಬಲ್ಸ್‌ನಲ್ಲಿ ಪ್ರಾರ್ಥನಾ ಹಾಗೂ ಪ್ರೇರಣಾ ಜೋಡಿ (6–2, 7–5) ಅಕ್ಷತಾ ಹಾಗೂ ಸ್ಫೂರ್ತಿ ಬಿರಾದಾರ ವಿರುದ್ಧ ಜಯ ಸಾಧಿಸಿದರು. ಮದ್ರಾಸ್ ವಿವಿ, 2–0ರಿಂದ ಕಟ್ಟಂಕುಲತ್ತೂರಿನ ಎಸ್‌ಆರ್‌ಎಂ ವಿವಿ ವಿರುದ್ಧ ಜಯ ಸಾಧಿಸಿತು.




ಬೆಳಗಾವಿಯಲ್ಲಿ ಶನಿವಾರ ಮುಕ್ತಾಯಗೊಂಡ ದಕ್ಷಿಣ ವಲಯ ಅಂತರ ವಿವಿ ಮಹಿಳಾ ಟೆನಿಸ್ ಟೂರ್ನಿಯ ಪ್ರಶಸ್ತಿ ಗೆದ್ದ ಬೆಂಗಳೂರಿನ ಜೈನ್ ವಿವಿ ತಂಡಕ್ಕೆ ವಿಟಿಯು ಕುಲಪತಿ ಎಚ್. ಮಹೇಶಪ್ಪ ಪ್ರಶಸ್ತಿ ವಿತರಿಸಿದರು